# ಶಕ್ತಿಸೌಧ ಗ್ರಂಥಾಲಯಕ್ಕೆ ಓದುಗರ ಬರ

**ಬೆಂಗಳೂರು:** ಕರೊನಾ ಎಫೆಕ್ಟ್‌ನಿಂದ ವಿಧಾನಸೌಧ ಗ್ರಂಥಾಲಯಗಳಿಗೆ ಭೇಟಿ ನೀಡುವವರ ಸಂಖ್ಯೆ ಕ್ಷೀಣಿಸಿದೆ. ಪ್ರತಿ ದಿನ ಗ್ರಂಥಾಲಯಕ್ಕೆ ಬಂದು ಪತ್ರಿಕೆ ಓದುತ್ತಿದ್ದ ಬಹಳಷ್ಟು ಜನರು, ಅತ್ತ ಮುಖವನ್ನೇ ಹಾಕುತ್ತಿಲ್ಲ.

» **ಕರೊನಾ ಎಫೆಕ್ಟ್**

ಇಲ್ಲಿನ ಗ್ರಂಥಾಲಯಗಳಿಗೆ ಐಎಎಸ್ ಅಧಿಕಾರಿಗಳಿಂದ ಹಿಡಿದು, ಕೆಎಎಸ್ ಅಧಿಕಾರಿಗಳು, ಸಿಬ್ಬಂದಿ, ಶಾಸಕರು ಎಲ್ಲರೂ ಭೇಟಿ ನೀಡುತ್ತಾರೆ. ಅಚ್ಚರಿ ಅಂದರೆ ಈ ಬಾರಿ ಕರೊನಾ ಅವಧಿಯಲ್ಲಿ ಅತಿ ಹೆಚ್ಚು ಪುಸ್ತಕ ತೆಗೆದುಕೊಂಡು ಹೋಗಿ ಓದಿ ಮರಳಿಸಿದವರಲ್ಲಿ ಐಎಎಸ್ ಅಧಿಕಾರಿಗಳೇ ಹೆಚ್ಚಿದ್ದಾರೆ. ವಿಧಾನಸೌಧದ ಮೊದಲ ಅಂತಸ್ತಿನಲ್ಲಿರುವ ಎರಡು ಗ್ರಂಥಾಲಯಗಳನ್ನು ನವೀಕರಣಗೊಳಿಸಿ, ಹೈಟೆಕ್ ಮಾಡಲಾಗಿದೆ. ಈಗ ಎಲ್ಲ ಪುಸ್ತಕಗಳು ಕಂಪ್ಯೂಟರ್ ಪಟ್ಟಿಯಲ್ಲಿಯೇ ಲಭ್ಯವಿದೆ. ಓದುಗರಿಗೆ ಅನುಕೂಲವಾಗುವಂತೆ ಎಲ್ಲ ಸೌಲಭ್ಯವನ್ನು ಒದಗಿಸಲಾಗಿದೆ. ಆದರೂ ಗ್ರಂಥಾಲಯಕ್ಕೆ ಬರುವುದಕ್ಕೆ ಜನರು ಹಿಂದೇಟು ಹಾಕುತ್ತಿದ್ದಾರೆ ಎನ್ನುತ್ತಾರೆ ಅಧಿಕಾರಿಗಳು.

**1.50 ಲಕ್ಷ ಪುಸ್ತಕ:** ವಿಧಾನಸಭೆ ಗ್ರಂಥಾಲಯದಲ್ಲಿ 1.50 ಲಕ್ಷಕ್ಕೂ ಹೆಚ್ಚು ಪುಸ್ತಕಗಳ ಸಂಗ್ರಹವಿದೆ. ತುಂಬಾ ಹಳೆದಾದ ಪುಸ್ತಕದಿಂದ ಹಿಡಿದು, ಇತ್ತೀಚೆಗಿನ ಹೊಸ ಪುಸ್ತಕಗಳ ತನಕ, ಖ್ಯಾತ ನಾಮರ ಸಾಹಿತ್ಯದಿಂದ ಹಿಡಿದು, ಇತ್ತೀಚೆಗಿನ ಯುವ ಪೀಳಿಗೆ ತನಕ ಪುಸ್ತಕಗಳು ಲಭ್ಯವಿವೆ.